

# ಇಂಗಿತಜ್ಞಾನವಿಲ್ಲದ ಸ್ವಂತಜ್ಞಾನದ ಅಪಾಯ!

ಅದೊಂದು ಗುರುಕುಲ. ಅಲ್ಲೊಬ್ಬ ಗುರು; ಆ ಗುರುವಿಗೆ ಹಲವರು ಶಿಷ್ಯರು. ಆ ದಿನ ಗುರುಗಳು ದೇವರ ಅಸ್ತಿತ್ವದ ಬಗ್ಗೆ ಪ್ರವಚನ ಮಾಡಿದರು. 'ದೇವರು, ಸರ್ವಾಂತರ್ಯಾಮಿ; ಎಲ್ಲೆಲ್ಲೂ ಅವನಿದ್ದಾನೆ. ಅವನಿರದ ಎಡೆಯೇ ಇಲ್ಲ; ಕಲ್ಲು, ಮಣ್ಣು, ಗಿಡ, ಮರ, ಜಲ, ಪ್ರಾಣಿ, ಪಕ್ಷಿ, ಮನುಷ್ಯ, ಸೂರ್ಯ, ಚಂದ್ರ, ಪರ್ವತ, ಕ್ರಿಮಿ, ಕೀಟ – ಎಲ್ಲೆಲ್ಲೂ ಎಲ್ಲದರಲ್ಲೂ ಇರುವವನೇ ದೇವರು. ''ಈಶಾವಾಸ್ಯಮಿದಂ ಸರ್ವಂ''... ಸೃಷ್ಟಿಯ ಎಲ್ಲ ವಿವರಗಳೂ ದೇವರಿಂದ ಆವೃತವಾಗಿದೆ.' – ಹೀಗೆ ಭಗವಂತನ ಬಗ್ಗೆ ಉಪದೇಶ ನಡೆಯಿತು.

ಶಿಷ್ಯರೆಲ್ಲರೂ ಭಿಕ್ಷಾಟನೆಗೆ ಹೊರಟರು. ಅವರೆಲ್ಲರೂ ಭಿಕ್ಷಾಟನೆಯಿಂದ ಹಿಂದಿರುಗುತ್ತಿದ್ದಾಗ ಕೋಲಾಹಲವೊಂದು ಕೇಳಿತು. ಶಿಷ್ಯರ ಗುಂಪಿಗೆ ಎದುರು ದಿಕ್ಕಿನಿಂದ ಆನೆಯೊಂದು ಓಡಿಬರುತ್ತಿತ್ತು; ಮದವೇರಿದ ಆನೆ. ಜನರು 'ಓಡಿ, ಓಡಿ' ಎಂದು ಅರಚುತ್ತ ದಿಕ್ಕಾಪಾಲಾಗಿ ಓಡುತ್ತಿದ್ದಾರೆ. ಆನೆಯ ಮೇಲೆ ಕುಳಿತಿದ್ದ ಮಾವುತನೂ ಜೋರಾಗಿ ಕೂಗುತ್ತಿದ್ದಾನೆ: 'ಓಡಿರಿ! ಓಡಿರಿ!! ದೂರಕ್ಕೆ ಓಡಿ. ಆನೆಗೆ ಮದ ಏರಿದೆ, ನಿಯಂತ್ರಣ ತಪ್ಪಿದೆ; ದಾರಿ ಬಿಡಿ, ಓಡಿ, ಓಡಿ!!'

ಶಿಷ್ಯರ ಗುಂಪಿನಲ್ಲಿದ್ದ ಎಲ್ಲರೂ ದೂರ ಓಡಿದರು; ಒಬ್ಬ ಮಾತ್ರ ಅಲ್ಲಿಯೇ ನಿಂತ. ಅವನಿಗೆ ಗುರುಗಳ ಅಂದಿನ ಉಪದೇಶ ಮನಸ್ಸಿಗೆ ಬಂದಿತು. 'ಎಲ್ಲರಲ್ಲೂ ಎಲ್ಲೆಲ್ಲೂ ದೇವರಿದ್ದಾನಲ್ಲವೆ? ಅಂತೆಯೇ ಆನೆಯಲ್ಲಿಯೂ ದೇವರಿದ್ದಾನೆ. ಹೀಗಾಗಿ ನಾನು ಆನೆಗೆ ಏಕಾದರೂ ಹೆದರಬೇಕು? ನಾನು ದೇವರು, ಅದೂ ದೇವರು; ದೇವರು ದೇವರಿಗೆ ಹೆದರಬೇಕೆ?' – ಹೀಗೆಂದು ಆಲೋಚಿಸಿ ಅವನು ಅಲ್ಲಿಯೇ ನಿಂತ.

ಓಡಿ ಬರುತ್ತಿದ್ದ ಆನೆಯ ಮೇಲಿದ್ದ ಮಾವುತ ಕಂಬದಂತೆ ನಿಂತಿದ್ದ ಆ ಶಿಷ್ಯನನ್ನು ನೋಡಿ ಜೋರಾಗಿಯೇ ಕೂಗಿ ಹೇಳಿದ: 'ಎಲೈ, ಮೂರ್ಖ ಹುಡುಗ! ಪಕ್ಕಕ್ಕೆ ಓಡು. ದೂರ ಹೋಗು. ಆನೆಯಿಂದ ಅಪಾಯ!!'

ಆದರೆ, ಆ ಶಿಷ್ಯ ಮಾತ್ರ ಅಲ್ಲಿಂದ ಕದಲಲಿಲ್ಲ. ಅವನಲ್ಲಿ ಸ್ವಲ್ಪವೂ ಹೆದರಿಕೆಯೂ ಇರಲಿಲ್ಲ. ಆನೆ ಅವನ ಹತ್ತಿರಕ್ಕೆ ಬಂದಿತು; ಒಂದೇ ಕ್ಷಣದಲ್ಲಿ ಅದು ಅವನನ್ನು ಸೊಂಡಿಲಿನಿಂದ ಎತ್ತಿ ದೂರಕ್ಕೆ ಎಸೆಯಿತು! ಅವನು ಪ್ರಜ್ಞೆ ತಪ್ಪಿಬಿದ್ದ. ಆನೆ ಅಲ್ಲಿಂದ ದೂರ ತೆರಳಿದ ಬಳಿಕ ಉಳಿದ ಶಿಷ್ಯರು ಅವನು ಬಿದ್ದ ಸ್ಥಳಕ್ಕೆ ಧಾವಿಸಿಬಂದರು. ತಮ್ಮ